## ಪ್ರೋಮೊ ಇಷ್ಟ ಆಗಲಿಲ್ಲ

ಟೀವಿ ವಾಹಿನಿಗಳ ಧಾರಾವಾಹಿ, ರಿಯಾಲಿಟಿ ಶೋ ಸೇರಿದಂತೆ ವಿಶೇಷ ಕಾರ್ಯಕ್ರಮಗಳಿಗೂ ಸೆನ್ಸಾರ್ ಅಗತ್ಯವಿದೆ. ಹೆಚ್ಚಿನ ಕಾರ್ಯಕ್ರಮಗಳು ಮನರಂಜನೆಗಿಂತ ಮನಸನ್ನು ವಿಚಲಿತ ಮಾಡುತ್ತವೆ. ಇವುಗಳಿಗೆ ಕಡಿವಾಣ ಇಲ್ಲದಿರುವುದರಿಂದ ಮಾರಕ ಸಂಗತಿಗಳು ಪ್ರಸಾರ ಆಗುತ್ತವೆ. ಇಂತಹ ತಪ್ಪುಗಳಿಗೆ ಅವಕಾಶ ಇಲ್ಲದಂತೆ ಆಗಬೇಕು.

ಕಲರ್ಸ್ ಕನ್ನಡದ 'ಕ್ವಾಟ್ಲೆ ಕಿಚನ್' ಕಾರ್ಯಕ್ರಮ ಬರುತ್ತಿದೆ. ಅದಕ್ಕೆ ಸಂಬಂಧಿಸಿದ ಜಾಹೀರಾತು ರೂಪದ ಪ್ರೋಮೊ ಕೂಡ ನೋಡಲು ಅಷ್ಟು ಇಷ್ಟ ಆಗಲ್ಲ.

—ಕೆ.ಎಸ್. ಸೋಮೇಶ್ವರ

## ಹೊಂದಿಕೆಯಾಗದ ದೃಶ್ಯ

ಕನ್ನಡ ಸುದ್ದಿಗಳ ಅವಸರದ ಪ್ರಸಾರದಿಂದ ಸುದ್ದಿಯ ನೈಜತೆಗಿಂತ ಗೊಂದಲವನ್ನು ಹೆಚ್ಚಿಸುತ್ತಿವೆ. ಸುದ್ದಿವಾಹಿನಿ ಒಂದು ಅಪ್ರಾಪ್ತಳ ಮದುವೆಗೆ ಸಂಬಂಧಿಸಿದ ವಿವರವನ್ನು ನೀಡುತ್ತಿತ್ತು. ಆ ಸಮಯದಲ್ಲಿ ಯುವತಿಯೋರ್ವಳು ಯುವಕನನ್ನು ನೀರಿಗೆ ತಳ್ಳಿದ ಚಿತ್ರ ಪ್ರಸಾರವಾಗುತ್ತಿತ್ತು. ಜೊತೆಗೆ ಅಡಿಬರಹದಲ್ಲಿ ಮಾಹಿತಿಯೂ ಬರುತ್ತಿತ್ತು. ವಾಚಿಸುವ ವರದಿಗೂ ಪ್ರದರ್ಶಿಸುವ ಚಿತ್ರಕ್ಕೂ ಹೊಂದಾಣಿಕೆಯಿರದಿದ್ದರೆ ವೀಕ್ಷಕರು ಏನೆಂದು ಅರ್ಥ ಮಾಡಿಕೊಳ್ಳಬೇಕು?

—ರಮಣ್ ಶೆಟ್ಟಿ ರೆಂಜಾಳ, ಮುಂಬೈ

## ಪಾಲಕರ ನಟನೆ

ಝೀ ಕನ್ನಡದ 'ಮಹಾನಟಿ' ಕಾರ್ಯಕ್ರಮದ ಕುಟುಂಬ ಸುತ್ತು ಸೊಗಸಾಗಿ ಮೂಡಿಬಂತು. ಮಹಾನಟಿಯರು ತಮ್ಮ ಕುಟುಂಬದವರೊಂದಿಗೆ ಅಭಿನಯಿಸಿದ್ದು ವಿಶೇಷವಾಗಿತ್ತು. ಕುಟುಂಬಸ್ಥರು ತಮ್ಮ ಮಕ್ಕಳ ಜೊತೆ ಅಭಿನಯಿಸಿದ ಪರಿ ವೇದಿಕೆಗೆ ಮೆರುಗು ತುಂಬಿತು. ನಟಿ ಉಮಾಶ್ರೀ ಅವರ ಲವಲವಿಕೆ ಮಾತುಕತೆ ಇಷ್ಟವಾಯಿತು.

—ಭಾರತೀ ಗಂಗಾಧರ್, ಬೆಂಗಳೂರು

## ಪಂಚಮಿ ವಿಶೇಷ

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ನಾಗರಪಂಚಮಿ ಪ್ರಯುಕ್ತ ರಂಗಭೂಮಿ ಕಲಾವಿದ ವಿಶ್ವೇಶ್ವರಿ ಬಸವಲಿಂಗ ಹಿರೇಮಠ ಹಾಗೂ ಉರಗ ಸಂರಕ್ಷಕ ಅರುಣ್ ಕುಮಾರ್ ಶುಕಪುರಿ ಅವರ ಸಂದರ್ಶನ ಚೆನ್ನಾಗಿತ್ತು.

ವಿಶ್ವೇಶ್ವರಿ ಹವ್ಯಾಸಿ ರಂಗತಂಡಗಳಿಗೆ ರಾಜ್ಯವ್ಯಾಪಿ ತರಬೇತಿ ನೀಡಿ ನಾಟಕ ಆಡಿಸಿದ್ದಾರೆ. ಮೂಲತಃ ಜನಪದ ಕಲಾವಿದರಾದ ಅವರು ತಮ್ಮ ಸಂಸ್ಥೆಯಲ್ಲೇ ಎಲ್ಲ ಹಬ್ಬವನ್ನು ಆಚರಿಸುವ ಬಗ್ಗೆ ತಿಳಿಸಿದರು.

ಉರಗ ತಜ್ಞ ಅರುಣ್ ನಾಟಕಕಾರರೂ ಹೌದು. ಮನೆ ಅಥವಾ ವಸತಿ ಪ್ರದೇಶಗಳಲ್ಲಿ ಬರುವ ಹಾವುಗಳನ್ನು ಸಂರಕ್ಷಿಸಿ, ನಾಗರಿಕರು ಮತ್ತು ವಿದ್ಯಾರ್ಥಿಗಳಿಗೆ ಆ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡುತ್ತಾರೆ ಎನ್ನುವುದು ಗೊತ್ತಾಯಿತು.

—ಬಿ. ಗಂಗಾಧರ, ಬೆಂಗಳೂರು

**ವಾರದ ಪತ್ರ**

## ಹೆಣ್ಣು ಕಪ್ಪಗಿದ್ದರೆ ಸುರಕ್ಷಿತವೇ?



'ಕಲರ್ಸ್ ಕನ್ನಡ'ದಲ್ಲಿ ಪ್ರಸಾರವಾಗುತ್ತಿರುವ 'ದೃಷ್ಟಿಬೊಟ್ಟು' ಧಾರಾವಾಹಿಯಲ್ಲಿ ನಾಯಕಿ ದೃಷ್ಟಿ ಆರಂಭದಲ್ಲಿ ಸುಂದರವಾಗಿಯೇ ಇರುತ್ತಾಳೆ. ನಂತರ ಆಕೆಯ ಸೌಂದರ್ಯವೇ ಆಕೆಗೆ ಮುಳುವಾಗುತ್ತದೆ ಎಂಬ ಭಯದಲ್ಲಿ ಆಕೆಯ ಸ್ವರೂಪವನ್ನು ಒಂದಿಷ್ಟು ವಿರೂಪಗೊಳಿಸಿ ಕಪ್ಪು ಬಣ್ಣದವಳಾಗಿ ಚಿತ್ರಿಸುತ್ತಿದ್ದಾರೆ.

ಅಂದರೆ ಹೆಣ್ಣು ಕಪ್ಪು ಮೈಬಣ್ಣದವಳಾಗಿದ್ದರೆ ಸುರಕ್ಷಿತಳಾಗಿರುತ್ತಾಳೆ ಎಂಬ ನಂಬಿಕೆಯನ್ನು ಇದು ಬಿತ್ತುತ್ತಿದೆಯೇ ಎಂದು ಅನುಮಾನ ಬಂದಿದ್ದು ನಿಜ. ಸಾಮಾನ್ಯವಾಗಿ ಮಾಧ್ಯಮವೊಂದು ವರ್ಣಭೇದದ ವಿರುದ್ಧ ಇರುತ್ತದೆ ಎನ್ನುವ ಭಾವನೆ ನಮ್ಮದು. ಧಾರಾವಾಹಿಯಲ್ಲಿ ಕಪ್ಪು ಮೈಬಣ್ಣದ ಹೆಣ್ಣನ್ನು ಕುರೂಪಿಯಂತೆ ಬಿಂಬಿಸುವುದು ಸರಿ ಕಾಣುತ್ತಿಲ್ಲ. ಮುಂದೆ ಅದಕ್ಕೆ ಬೇರೆ ತಿರುವು ಸಿಗಬಹುದು ಅಥವಾ ಬೇರೆ ರೀತಿಯ ಬದಲಾವಣೆಯೂ ಆಗಬಹುದು. ಆದರೆ ಅಂಥವರಿಗೆ ಗಂಡು ಸಿಗುವುದಿಲ್ಲ ಎನ್ನುವ ಅರ್ಥ ಬರದಿದ್ದರೆ ಸಾಕು. 'ಹೆಣ್ಣಿರಲಿ, ಗಂಡಿರಲಿ ವ್ಯಕ್ತಿತ್ವ, ಸಾಧನೆ ಮುಖ್ಯವಾಗಬೇಕೇ ಹೊರತು ಮೈಬಣ್ಣವಲ್ಲ' ಮುಂದೆ ಧಾರಾವಾಹಿ ಕೂಡ ಇದನ್ನೇ ಹೇಳಬಹುದು ಎನ್ನುವ ನಿರೀಕ್ಷೆ ಇದೆ. ಆದಷ್ಟು ಬೇಗ ಕಥೆಗೆ ಆ ತಿರುವನ್ನು ನೀಡಿ ವರ್ಣಭೇದದ ಅಮಾನವೀಯ ಗುಣವನ್ನು ಬಹಿರಂಗಪಡಿಸಲಿ ಎನ್ನುವ ಬಯಕೆ ನಮ್ಮದು.

—ಸರಿತಾ, ದಾವಣಗೆರೆ

## ಅಡುಗೆ ಮನೆಗೆ ಇದಲ್ಲ

ಕಲರ್ಸ್ ಕನ್ನಡದ 'ಕ್ವಾಟ್ಲೆ ಕಿಚನ್' ಶೋ ಪರಿಕಲ್ಪನೆ ಚೆನ್ನಾಗಿದೆ. ಆದರೆ, ಅಡುಗೆ ಮನೆಯಲ್ಲಿ ಕೀಳು ಅಭಿರುಚಿಯ ನಾಟಕ ಮಾಡುತ್ತಾರೆ ಅನ್ನಿಸುತ್ತದೆ. ಡಬಲ್ ಮೀನಿಂಗ್ ಪದ ಪ್ರಯೋಗಕ್ಕೆ ಕಡಿವಾಣ ಹಾಕಬೇಕು. ಕಾರ್ಯಕ್ರಮದಲ್ಲಿ ಭಾಗವಹಿಸುವ ಕಲಾವಿದರೂ ಸೌಟು ಹಿಡಿದು ಕಿರುಚಾಡುತ್ತಾರೆ.

ನಟರಾದ ಶ್ರುತಿ, ಅನುಪಮಾ ಗೌಡ, ಕುರಿ ಪ್ರತಾಪ್ ಅವರನ್ನು ನೋಡಿದರೆ ಮರುಕ ಹುಟ್ಟುತ್ತದೆ. ಇನ್ನು ವಾರಾಂತ್ಯದ ಕಾರ್ಯಕ್ರಮಗಳೂ ಸಹ ಇದರಿಂದ ಹೊರತಾಗಿಲ್ಲ. ಇಂತಹ ಕಾರ್ಯಕ್ರಮಗಳು ಮನರಂಜನೆ ನೀಡುವುದಕ್ಕಿಂತ ಕಿರಿಕಿರಿಯನ್ನು ಉಂಟು ಮಾಡುತ್ತವೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಧ್ವನಿ ಗ್ರಹಿಸಲಾಗಲಿಲ್ಲ

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮವನ್ನು ತುಂಬ ವರ್ಷಗಳಿಂದ ತಪ್ಪದೇ ನೋಡುತ್ತೇನೆ. ನಮ್ಮ ಜ್ಞಾನವನ್ನು ವೃದ್ಧಿಸುವ ಈ ಕಾರ್ಯಕ್ರಮ ನನಗೆ ಅಚ್ಚುಮೆಚ್ಚು. ಅದರಲ್ಲಿ ಕನ್ನಡಕ್ಕೆ ಮೀಸಲಾಗಿರುವ ಶುಕ್ರವಾರದ ಸಂಚಿಕೆ ಅತ್ಯಮೂಲ್ಯ ಎಂದು ನನಗೆ ಅನ್ನಿಸುತ್ತದೆ. ಒಂದು ದಿನ ಏನಾದರೂ ನೋಡಲು ಸಾಧ್ಯ ಆಗದಿದ್ದರೆ ಮರುದಿನ ಮೊಬೈಲ್‌ನಲ್ಲಿ ನೋಡುತ್ತೇನೆ. ಕಳೆದ ವಾರವೂ ಹೀಗೆ ಮೊಬೈಲ್‌ನಲ್ಲಿ ನೋಡುತ್ತಿದ್ದಾಗ ಭಾವಗೀತೆಯನ್ನು ಸೂಚಿಸಿ ಬರೆದ ಕವಿಯ ಹೆಸರನ್ನು ಗುರುತಿಸಲು ನಾಲ್ಕು ಆಯ್ಕೆಗಳನ್ನು ನೀಡಿದ್ದನ್ನು ಗಮನಿಸಿದೆ. ಆದರೆ ನನಗೆ ಆ ಗೀತೆ ಕೇಳಲು ಸಾಧ್ಯ ಆಗಲಿಲ್ಲ. ಸ್ಪರ್ಧಿಗಳಿಗೂ ಹಾಗೆಯೇ ಆಗಿರಬಹುದು. ಹಾಗಾಗಿ ಸಂಭಾಷಣೆಯಷ್ಟೇ ಗಟ್ಟಿಯಾಗಿ ಗೀತೆಯನ್ನು ಪ್ರಸಾರ ಮಾಡಿದರೆ ಆ ಕೊರತೆ ನೀಗಬಹುದು ಎನ್ನುವುದು ನನ್ನ ಅಭಿಮತ.

—ಕೆ.ಎನ್. ಪ್ರಭಾಕರಗುಪ್ತ

## ನಾಡು ನುಡಿಗೆ ಇರಲಿ ಜಾಗ

ನಿತ್ಯ ನಿದ್ರೆಗೆ ಜಾರುವ ಮುನ್ನ 'ತಿರುಗುಬಾಣ' ಸಿನಿಮಾದ 'ಇದೇ ನಾಡು ಇದೇ ಭಾಷೆ ಎಂದೆಂದೂ ನಮ್ಮದಾಗಿರಲಿ...' ಎಂಬ ಈ ಹಾಡನ್ನು ಕೇಳುತ್ತೇನೆ. ಇಂದಿನ ಸಿನಿಮಾಗಳಲ್ಲಿ ಈ ರೀತಿಯ ಗೀತ ರಚನೆ ಕಡಿಮೆ. ಇದು ತುಂಬ ಬೇಸರವನ್ನು ಉಂಟು ಮಾಡುತ್ತದೆ. ಟೀವಿಗಳೂ ಕನ್ನಡ ಭಾಷೆ, ನಾಡಿನ ಹಿರಿಮೆ ಗರಿಮೆಯನ್ನು ಬಿಂಬಿಸುವ ಹಾಡುಗಳನ್ನು ಪ್ರಸಾರ ಮಾಡಿದರೆ ಚೆನ್ನಾಗಿರುತ್ತದೆ ಎಂದು ಅನ್ನಿಸುತ್ತದೆ.

—ಷಣ್ಮುಖ ಎಸ್.ಎಚ್., ಹಳೇಬಾತಿ